ಪ್ರಧಾನ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ದಿನಾಂಕ 26ನೇ ಸೆಪ್ಟೆಂಬರ್ ತಿಂಗಳು 2017 ರಂದು.

ಸಿ.ಸಿ. 1492/2016

ಪಿರ್ಯಾದುದಾರರುಃ- ಸರ್ಕಾರದ ಪರವಾಗಿಃ **ಕಡೂರು** ಪೋಲೀಸರು

ವಿರುದ್ಧ

ಆರೋಪಿತರುಃ- **ಕಾರ್ತಿಕ ಅಲಿಯಾಸ್ ಕಾರ್ತಿಕ್ ಮತ್ತು ಇತರರು**

ಶ್ರೀಮತಿ ಅನಿತಾ ಬಿ.ಎ., (ಲಾ) ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಕಾರ್ತಿಕ ಅಲಿಯಾಸ್ ಕಾರ್ತಿಕ್ ಬಿನ್ ಅಶೋಕ, 20 ವರ್ಷ, ವಿದ್ಯಾರ್ಥಿ, ವಾಸಃ ಬೀರೂರು, ಕಡೂರು ತಾಲ್ಲೂಕು.

2. ಶಿವಾನಾಂದ ಅಲಿಯಾಸ್ ಶಿವು ಬಿನ್ ವಾಸು, 20 ವರ್ಷ, ವಾಸಃ ವೆಂಕಟೇಶ್ವರ ನಗರ, ಕಡೂರು.

3. ವಿಜಯ ಬಿನ್ ಪುಟ್ಟರಾಜು, 21 ವರ್ಷ, ವಿದ್ಯಾರ್ಥಿ, ವಾಸಃ ಕೆಂಪರಾಜುರವರ ಮನೆಯ ಮುಂಭಾಗ ಮರವಂಜಿ ವೃತ್ತ, ಕಡೂರು ಟೌನ್.

4. ರಾಘವೇಂದ್ರ ಅಲಿಯಾಸ್ ರಘು ಬಿನ್ ನಾರಾಯಣ, 19 ವರ್ಷ, ಕೂಲಿ, ವಾಸಃ ಬಳ್ಳಾರಿ ಕ್ಯಾಂಪ್, ಬೀರೂರು, ಕಡೂರು.

5. ಲೋಹಿತ ಬಿನ್ ಪ್ರಹ್ಲಾದ್, 20 ವರ್ಷ, ವ್ಯವಸಾಯ, ವಾಸಃ ಉಪ್ಪಾರ ಕ್ಯಾಂಪ್, ಬೀರೂರು.

**<u>ದೋಷಾರೋಪಣೆ</u>**

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ **10-12-2015** ರಂದು **ರಾತ್ರಿ 10-30 ಗಂಟೆಯಲ್ಲಿ ಕಡೂರು ಠಾಣಾ ವ್ಯಾಪ್ತಿಯ ಕಡೂರು ನಗರದ ಟಿ.ಬಿ. ರಸ್ತೆಯ ತಾಲ್ಲೂಕು ಕಛೇರಿ ಮುಂಭಾಗ ಇರುವ ಚಾಸಾ-1 ಗೋವಿಂದಪ್ಪರವರಿಗೆ ಸೇರಿದ ರವಿಕಿರಣ ರೆಸಿಡೆನ್ಸಿಯಲ್ಲಿ ಅದರ ಸೂಪರ್‌ವೈಸರ್ ಆದ ಚಾಸಾ-6 ರಂಗಸ್ವಾಮಿರವರು ಇರುವಾಗ 1 ರಿಂದ 4ನೇ ಆರೋಪಿತರಾದ ನೀವು ಬಂದು ರೂಂ. ನಂ.207 ಮತ್ತು 208 ನ್ನು ಬಾಡಿಗೆಗೆ ಪಡೆದು ರಾತ್ರಿ 12-30 ಗಂಟೆಗೆ 5ನೇ ಆರೋಪಿಯಾದ ನೀವು ಬಂದು 1 ರಿಂದ 4ನೇ ಆರೋಪಿತರಾದ ನಿಮ್ಮೊಂದಿಗೆ ಸೇರಿಕೊಂಡು ರೂಂ.ಗಳಲ್ಲಿ ಜೋಡಿಸಿದ್ದ ಎಲ್.ಜಿ. ಕಂಪನಿಯ 2 ಎಲ್.ಸಿ.ಡಿ. ಟಿವಿಗಳನ್ನು ಕಳ್ಳತನ ಮಾಡಿರುತ್ತೀರಿ** ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ **380 ರೀತ್ಯಾ** ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

-ಸಹಿ-

ಪ್ರ: ಪ್ರ:ದ:ನ್ಯಾ:ದಂ: ಕಡೂರು.